■ ಹನಿ

# ಭ್ರಷ್ಟಾಚಾರಕ್ಕೆ 'ಬಲಿ'



**ದೇ**ಶಕ್ಕೆ ದೇಶವೇ ಭ್ರಷ್ಟಾಚಾರದ ವಿರುದ್ಧ ಅಣ್ಣಾ ಹಜಾರೆ ನೇತೃತ್ವದಲ್ಲಿ ಹೋರಾಟದ ಹುಮ್ಮಸ್ಸಿನಲ್ಲಿದ್ದಾಗ, ಮಧ್ಯಪ್ರದೇಶದ ಭೋಪಾಲ್‌ನಲ್ಲಿ ಶೆಹ್ಲಾ ಮಸೂದ್ ಎಂಬ ಹೆಣ್ಣು ಮಗಳನ್ನು ಹಂತಕರು ಗುಂಡಿಟ್ಟು ಕೊಂದಿದ್ದಾರೆ. ಭೋಪಾಲ್‌ನಲ್ಲಿ ಭ್ರಷ್ಟಾಚಾರದ ವಿರುದ್ಧ ಹೋರಾಟದಲ್ಲಿ ಸಕ್ರಿಯವಾಗಿ ಭಾಗವಹಿಸಿರುವ ಶೆಹ್ಲಾ ಹೋರಾಟದಲ್ಲಿ ಹುತಾತ್ಮಳಾಗಿದ್ದಾರೆ.

35ರ ಹರೆಯದ ಶೆಹ್ಲಾ, ಭೋಪಾಲ್‌ನಲ್ಲಿ ಬಹುತೇಕ ಜನಪರ ಚಳುವಳಿಗಳಲ್ಲಿ ಮುಂಚೂಣಿಯಲ್ಲಿ ನಿಲ್ಲುತ್ತಿದ್ದರು. ಪರಿಸರ ಹೋರಾಟ, ಪಾರದರ್ಶಕ ಕಾಯ್ದೆ, ಮಾನವ ಹಕ್ಕುಗಳ ಹೋರಾಟ, ವನ್ಯಜೀವಿಗಳ ಸಂರಕ್ಷಣಾ ಕಾರ್ಯಕ್ರಮ, ಮುಸ್ಲಿಂ ಮಹಿಳೆಯರ ಹಕ್ಕುಗಳ ಹೋರಾಟ, ಪೊಲೀಸರ ನಡವಳಿಕೆ ಸುಧಾರಣೆ– ಹೀಗೆ ಈಕೆ ತೊಡಗಿಸಿಕೊಂಡಿದ್ದ ಹೋರಾಟಗಳು ಒಂದೆರಡಲ್ಲ. ಎಲ್ಲಕ್ಕಿಂತ ಮುಖ್ಯವಾಗಿ ಮಾಹಿತಿ ಹಕ್ಕು ಕಾರ್ಯಕರ್ತೆಯಾಗಿ, ಹಲವಾರು ಪ್ರಕರಣಗಳನ್ನು ಬಯಲಿಗೆಳೆದಿದ್ದಾರೆ. ಮಧ್ಯಪ್ರದೇಶದ ಅಭಯಾರಣ್ಯಗಳಲ್ಲಿ ಹಲವಾರು ಹುಲಿಗಳು ಸತ್ತ ಪ್ರಕರಣಗಳಲ್ಲಿ ಅಧಿಕಾರಿಶಾಹಿ ಕೈವಾಡವನ್ನು ಬಯಲಿಗೆಳೆದ ಕೀರ್ತಿಯೂ ಇವರದ್ದು.

ಉದಯ್ ಎನ್ನುವ ಸ್ವಯಂಸೇವಾ ಸಂಸ್ಥೆಯ ಕಾರ್ಯದರ್ಶಿಯಾಗಿ, ಸ್ವಂತ ಇವೆಂಟ್ ಮ್ಯಾನೇಜ್‌ಮೆಂಟ್ ಕಂಪೆನಿಯೊಂದನ್ನೂ ಶೆಹ್ಲಾ ಹೊಂದಿದ್ದರು. ಸಾಹಸಕ್ರೀಡೆ, ಮೋಟೋ ರೇಸ್‌ಗಳನ್ನು ಈ ಸಂಸ್ಥೆ ಆಯೋಜಿಸುತ್ತಿತ್ತು. ಅವಿವಾಹಿತೆಯಾಗಿದ್ದು ತಂದೆಯ ಜತೆ ವಾಸವಿದ್ದ ಶೆಹ್ಲಾರ ಏಕೈಕ ತಂಗಿ ಅಮೆರಿಕದಲ್ಲಿ ವಾಸವಿದ್ದಾರೆ. ಶೆಹ್ಲಾರನ್ನು ಕೊಂದದ್ದು ಯಾರು ಎಂಬುದೀಗ ಸಿಬಿಐ ತನಿಖೆಯ ಮುಂದಿರುವ ಪ್ರಶ್ನೆ. ಈಗಾಗಲೇ ಮಧ್ಯಪ್ರದೇಶದಲ್ಲಿ ಒಟ್ಟು 13 ಮಂದಿ ಮಾಹಿತಿ ಹಕ್ಕು ಕಾರ್ಯಕರ್ತರು ಕೊಲೆಗೀಡಾಗಿದ್ದಾರೆ ಎನ್ನುವುದು ಲಘುವಾದ ಸಂಗತಿಯೇನಲ್ಲ. ಸಿಬಿಐ ಕ್ಷಿಪ್ರ ತನಿಖೆ ಮಾಡಿದಷ್ಟೂ ದೇಶಕ್ಕೆ ಒಳ್ಳೆಯದು.

# ನಾಯಕನ ಹುಮ್ಮಸ್ಸು



**2004**ರಲ್ಲಿ ಇಂಗ್ಲೆಂಡ್ ತಂಡ ಲಾರ್ಡ್ಸ್‌ನಲ್ಲಿ ನ್ಯೂಜಿಲೆಂಡ್ ವಿರುದ್ಧ ಟೆಸ್ಟ್ ಆಡುತ್ತಿತ್ತು. ಮೈಕೆಲ್ ವಾಘನ್ ಗಾಯಗೊಂಡು ನಿರ್ಗಮಿಸಿದಾಗ ಆತನಿಗೆ ಬದಲಿಯಾಗಿ ತಂಡಕ್ಕೆ ಬಂದಾತ ಆ್ಯಂಡ್ರೂ ಜಾನ್ ಸ್ಟ್ರಾಸ್. ಹೀಗೆ ಬಂದ ಬದಲಿ ಆಟಗಾರ ಮೊದಲ ಇನಿಂಗ್ಸ್‌ನಲ್ಲಿ 112 ರನ್ ಹೊಡೆದ. 2ನೇ ಇನಿಂಗ್ಸ್‌ನಲ್ಲಿ 83 ರನ್ ಹೊಡೆದು ರನೌಟ್ ಆಗಿ ಪೆವಿಲಿಯನ್‌ಗೆ ಮರಳಿದ. ಅಲ್ಲಿಗೆ ಹೊಸ ಇತಿಹಾಸವೊಂದು ಸೃಷ್ಟಿಯಾಯಿತು. ಆ ಬದಲಿ ಆಟಗಾರ ಈಗ ಇಂಗ್ಲೆಂಡಿನ ಯಶಸ್ವಿ ಕಪ್ತಾನ.

ಹಾಗೆಂದು ಆ್ಯಂಡ್ರೂ ಸ್ಟ್ರಾಸ್‌ರದ್ದು ಕ್ರಿಕೆಟ್‌ನಲ್ಲಿ ಉದ್ದಕ್ಕೂ ಹೂವು ಹಾಸಿದ ಹಾದಿಯೇನಲ್ಲ. 2007ರಲ್ಲಿ ಫಾರ್ಮ್ ಕಳೆದುಕೊಂಡಿದ್ದಾರೆ ಎಂದು ಇದೇ ಸ್ಟ್ರಾಸ್‌ರನ್ನು ಇಂಗ್ಲೆಂಡ್ ಆಯ್ಕೆ ಮಂಡಳಿ ಟೆಸ್ಟ್ ತಂಡದಿಂದ ಕೈಬಿಟ್ಟಿತ್ತು. ಆಗ ಶ್ರೀಲಂಕಾ ವಿರುದ್ಧ ಆಡಲು ಸ್ಟ್ರಾಸ್ ಇರಲಿಲ್ಲ. ಆದರೆ ಒಂದೇ ವರ್ಷದಲ್ಲಿ ಮರಳಿ ಫಾರ್ಮ್‌ಗೆ ಬಂದ ಸ್ಟ್ರಾಸ್ ನ್ಯೂಜಿಲೆಂಡ್ ವಿರುದ್ಧ ಟೆಸ್ಟ್ ಸರಣಿಗೆ ಆಯ್ಕೆಯಾದರು. ಮೂರನೇ ಟೆಸ್ಟ್‌ನಲ್ಲಿ ಜೀವನಶ್ರೇಷ್ಠ 177 ರನ್ ಹೊಡೆದರು.

ಕ್ರಿಕೆಟ್‌ನ ತವರೂರಾದ ಇಂಗ್ಲೆಂಡಿನ ಪ್ರೇಕ್ಷಕರಿಗೀಗ ಈತ ಅಚ್ಚುಮೆಚ್ಚು. 2009ರಿಂದ ವೆಸ್ಟ್ ಇಂಡೀಸ್, ಆಸ್ಟ್ರೇಲಿಯಾ, ಪಾಕಿಸ್ತಾನ, ಶ್ರೀಲಂಕಾ– ಹೀಗೆ ಎಲ್ಲ ತಂಡಗಳ ವಿರುದ್ಧವೂ ಸರಣಿ ಟೆಸ್ಟ್ ಜಯ ಸಾಧಿಸಿರುವ ಇಂಗ್ಲೆಂಡ್ ತಂಡ, ದಕ್ಷಿಣ ಆಫ್ರಿಕಾ ವಿರುದ್ಧ ಮಾತ್ರ 1–1 ಸಮಬಲ ಸಾಧಿಸಿತ್ತು. ಈ ಗೆಲುವುಗಳಲ್ಲಿ ಸ್ಟ್ರಾಸ್ ಪಾತ್ರ ಅತ್ಯಂತ ಮಹತ್ವದ್ದು.

ಸ್ಟ್ರಾಸ್ ಹುಟ್ಟಿದ್ದು ದಕ್ಷಿಣ ಆಫ್ರಿಕಾದಲ್ಲಿ. (ಬರ್ತ್‌ಡೇ 2/3/77) 6ರ ಹರೆಯದಲ್ಲಿ ಇಂಗ್ಲೆಂಡಿಗೆ ವಲಸೆ. ಆರಂಭದಲ್ಲಿ ಆಸ್ಟ್ರೇಲಿಯಾ ಲೋಕಲ್ ಕ್ಲಬ್‌ಗಳಲ್ಲಿ ಆಟ. ಒಂದೊಂದೇ ಹೆಜ್ಜೆಯಿಟ್ಟು ಖ್ಯಾತಿಯತ್ತ ನಡಿಗೆ. ಈಗಂತೂ ವಿಶ್ವಚಾಂಪಿಯನ್ ಭಾರತ ತಂಡವನ್ನು ಬಗ್ಗುಬಡಿದ ಸಂಭ್ರಮ. ಆಸ್ಟ್ರೇಲಿಯನ್ ನಟಿ ರೂಥ್ ಮೆಕ್‌ಡೊನಾಲ್ಡ್ ಜತೆ ಮದುವೆಯಾಗಿ ಎರಡು ಮಕ್ಕಳ ತಂದೆಯಾಗಿರುವ ಸ್ಟ್ರಾಸ್, ಅಂಧರ ಕ್ರಿಕೆಟ್ ಜನಪ್ರಿಯತೆಗೆ ಫಂಡ್ ರೂಪಿಸಿದ್ದಾರೆ.

ಸ್ವತಃ ತಾನೂ ಕಣ್ಣಿಗೆ ಬಟ್ಟೆ ಕಟ್ಟಿ ಅಂಧರೊಡನೆ ಕ್ರಿಕೆಟ್ ಆಡಿದ್ದಾರೆ. ಹತ್ತಾರು ನಿಕ್‌ನೇಮ್‌ಗಳಿಂದ ಕರೆಯಲ್ಪಡುವ ಸ್ಟ್ರಾಸ್ ತಂಡದ ಸಹ ಆಟಗಾರರಲ್ಲಿ 'ದಿ ಜನರಲ್' ಎಂದೇ ಜನಪ್ರಿಯ.

Printed and Published by S.V. Srinivasan on behalf of The Printers (Mysore) Private Ltd. Printed at Rajhans Enterprises, No.134, 4th Main Road, Industrial Town, Rajajinagar, Bangalore- 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bangalore - 560074. Editor: K.N. TILAK KUMAR.
Editorial Office: 75, M.G Road, Bangalore-560 001 E-mail:editorsu@sudha.co.in. Phone: 2588 0000, Fax: 25880618, Editorial:25880619, Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65